ದಿನಾಂಕಃ **19.09.2024**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-

ನಾಗಮ್ಮನ ಗಂಡನ ಹೆಸರನ್ನು ನಾನು ಕೊಟ್ಟ ವಂಶವೃಕ್ಷದಲ್ಲಿ ಸೇರಿಸಿಲ್ಲ ಎಂದರೆ ಸರಿ. ದ್ಯಾವಪ್ಪನ ಹೆಸರಿಗೆ ಪಹಣಿ ಇತ್ತು. ದ್ಯಾವಪ್ಪನ ತಂದೆಯ ಹೆಸರು ಕೊಟ್ರಪ್ಪ. ದ್ಯಾವಪ್ಪನ ತಂದೆಯ ಹೆಸರನ್ನು ಭರಮಣ್ಣ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ ಎನ್ನುವುದು ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ದ್ಯಾವಪ್ಪನ ತಂದೆಯ ಹೆಸರನ್ನು ಭರಮಣ್ಣ ಎಂದು ಸುಳ್ಳು ಬರೆಸಿದ್ದೇನೆ ಎನ್ನುವುದು ಸರಿಯಲ್ಲ.

ದ್ಯಾವಣ್ಣ ಯಾವಾಗ ತೀರಿದರು ಎಂದು ನನಗೆ ಗೊತ್ತಿಲ್ಲ. ದ್ಯಾವಣ್ಣನ ವಂಶವೃಕ್ಷವನ್ನು ನಾನು ಹಾಜರುಪಡಿಸಿಲ್ಲ. ದ್ಯಾವಣ್ಣ ಬಿನ್ ಕೊಟ್ರಬಸಪ್ಪ ಎಂಬುವವರ ವಂಶವೃಕ್ಷವನ್ನು ಹಾಜರುಪಡಿಸಿಲ್ಲ. ದ್ಯಾವಣ್ಣ ಬಿನ್ ಭರಮಣ್ಣ ಎಂಬ ವಂಶವೃಕ್ಷವನ್ನು ನಾನು ಹಾಜರುಪಡಿಸಿಲ್ಲ. ದ್ಯಾವಪ್ಪನ ಸೊಸೆ ನಾಗಮ್ಮ. ನಾಗಮ್ಮನ ಗಂಡ ಕೊಟ್ರಪ್ಪ. ಅವರಿಗೆ ಯಾವುದೇ ಮಕ್ಕಳಿಲ್ಲ ಎನ್ನುವುದು ಸರಿ. ದ್ಯಾವಣ್ಣ ಮತ್ತು ಕೊಟ್ರಪ್ಪ ಇಬ್ಬರೂ ಸ್ವಂತ ಅಣ್ಣತಮ್ಮಂದಿರು ಎನ್ನುವುದು ಸರಿಯಲ್ಲ. 5 ಮತ್ತು 6 ನೇ ಪ್ರತಿವಾದಿಯರು ಹಾಜರುಪಡಿಸಿರುವ ವಂಶವೃಕ್ಷದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ವಕೀಲರನ್ನು ಕೇಳಿ ಅವರು ದಾಖಲಿಸಿದ ವಂಶವೃಕ್ಷದ ಬಗ್ಗೆ ತಿಳಿದುಕೊಳ್ಳಲಿಲ್ಲ. 5 ಮತ್ತು 6 ನೇ ಪ್ರತಿವಾದಿಯರು ಏನೆಂದು ತಕರಾರು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತು. 5 ಮತ್ತು 6 ನೇ ಪ್ರತಿವಾದಿಯರು ಸಲ್ಲಿಸಿರುವ ವಂಶವೃಕ್ಷ ಸರಿ ಇರುವುದಿಲ್ಲ.

ಕೊಟ್ರಪ್ಪನ ಹಿರಿಯ ಮಗಳು ಹಿರಿಯಮ್ಮ (3 ನೇ ಪ್ರತಿವಾದಿ). 4 ನೇ ಪ್ರತಿವಾದಿ 3 ನೇ ಪ್ರತಿವಾದಿಯ ಮಗಳು. ಚಂದ್ರಪ್ಪ ಮತ್ತು ಕರಿಬಸಪ್ಪ ಈ ಕೇಸಿನ ಪಕ್ಷಗಾರರು. ಅವರು ಬಸಪ್ಪನ ಮಕ್ಕಳು ಎನ್ನುವುದು ಸರಿಯಲ್ಲ. ಅವರು ಯಾರ ಮಕ್ಕಳೆಂದು ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ ನನಗೆ ಗೊತ್ತಿಲ್ಲ. ಅವರ ತಂದೆ ಹೆಸರು ಬಸವರಾಜಪ್ಪ. 8 ನೇ ಪ್ರತಿವಾದಿಯ ತಾಯಿಯ ಹೆಸರು ಶಾರದಮ್ಮ. 8 ನೇ ಪ್ರತಿವಾದಿ 3 ಮತ್ತು 4 ನೇ ಪ್ರತಿವಾದಿಯಿಂದ ಸರ್ವೆ ನಂಬರ್ 151/6, 151/7 ಮತ್ತು 151/8 ಆಸ್ತಿಗಳನ್ನು ಖರೀದಿಸಿದ್ದಾರೆ ಎನ್ನುವುದು ಸರಿ. ಮಾರಾಟ ಮಾಡುವ ಮೊದಲು ಸದರಿ ಆಸ್ತಿಗಳ ಖಾತೆ 3 ನೇ ಪ್ರತಿವಾದಿ ಹಿರಿಯಮ್ಮಳ ಹೆಸರಿಗೆ ಇತ್ತು. 2023 ರಲ್ಲಿ 8 ನೇ ಪ್ರತಿವಾದಿ ಮೇಲೆ ಹೇಳಿದ ಆಸ್ತಿಗಳನ್ನು ಖರೀದಿ ಮಾಡಿದರು. 2008 ರಲ್ಲಿ 3 ನೇ ಪ್ರತಿವಾದಿ ಹೆಸರಿಗೆ ಸದರಿ ಆಸ್ತಿಗಳ ಖಾತೆ ಪೌತಿ ಮೇರೆಗೆ ಆಯಿತು. ಹುಲಗಮ್ಮ, ನಾಗಮ್ಮ ತೀರಿದ್ದರಿಂದ ಅವರ ಹೆಸರಿಗೆ ಖಾತೆ ಆಯಿತು. ರಾಮಪ್ಪ ಎನ್ನುವವರ ಬಗ್ಗೆ ನನಗೆ ಗೊತ್ತಿದೆ. ಅವರು 3 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಬಾರದು ಎಂದು ತಕರಾರು ಹಾಕಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ದ್ಯಾವಪ್ಪನ ಬಿನ್ ಲೋಕಪ್ಪ ತಕರಾರು ಸಲ್ಲಿಸಿದ್ದರು ಎನ್ನುತ್ತಾರೆ. ತಹಶೀಲ್ದಾರ್ ರವರ ಮುಂದೆ ನಡೆದ ಪ್ರಕರಣದಲ್ಲಿ ಯಾರೆಲ್ಲಾ ಪಕ್ಷಗಾರರಾಗಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ದ್ಯಾವಪ್ಪ ಪಕ್ಷಗಾರರಾಗಿರಲಿಲ್ಲ. ದ್ಯಾವಪ್ಪನ

ತಂದೆ ಲೋಕಪ್ಪ. ದ್ಯಾವಪ್ಪನ ವಂಶವೇ ಬೇರೆ, 3 ನೇ ಪ್ರತಿವಾದಿಯ ವಂಶವೇ ಬೇರೆ ಎಂದರೆ ಸರಿ. ರಾಮಪ್ಪನ ವಾರಸುದಾರರಿಗೆ ನೋಟೀಸ್ ಮಾಡಿ 3 ನೇ ಪ್ರತಿವಾದಿ ಖಾತೆ ಮಾಡಿರುತ್ತಾರೆ. ತಹಶೀಲ್ದಾರ್ ರವರು ಯಾವಾಗ ಆದೇಶ ಮಾಡಿದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದ 2008 ರಲ್ಲಿ ಮಾಡಿರುತ್ತಾರೆ ಎನ್ನುತ್ತಾರೆ. ದ್ಯಾವಪ್ಪ ತಕರಾರು ಸಲ್ಲಿಸಿದ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿದ್ದೇನೋ ಇಲ್ಲವೊ ನನಗೆ ಗೊತ್ತಿಲ್ಲ. ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಮತ್ತು ದ್ಯಾವಪ್ಪ ಯಾವುದೇ ತಕರಾರು ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿ ಪ್ರಕಾಶ ನನಗೆ ಗೊತ್ತು. ಪ್ರಕಾಶ 3 ನೇ ಪ್ರತಿವಾದಿಯಿಂದ ಆಸ್ತಿ ಸರ್ವೆ ನಂಬರ್ 35 ರಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿ. ಅದು ದಾವಾ ಆಸ್ತಿಯ ಐಟಂ ನಂಬರ್ 5 ಎನ್ನುವುದು ಸರಿಯಲ್ಲ. 2002 ರಲ್ಲಿ 3 ನೇ ಪ್ರತಿವಾದಿಯ ಹೆಸರಿನಲ್ಲಿ ಸದರಿ ಆಸ್ತಿ ಖಾತೆಯಾಗಿತ್ತು ಎನ್ನುವುದು ಸರಿ. 3 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಸದರಿ ಸರ್ವೆ ನಂಬರ್ ನಲ್ಲಿ 1 ಎಕರೆ 9 ಗುಂಟೆಯನ್ನು ಮಾರಾಟ ಮಾಡಿದರು ಎಂದರೆ ಸರಿ. ಕ್ರಯಪತ್ರ ಆದಾಗಿನಿಂದ 5 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. 5 ನೇ ಪ್ರತಿವಾದಿಗೆ ಕಾನೂನು ಬದ್ಧವಾಗಿ ಖಾತೆಯಾಗಿದೆ ಎಂದರೆ ಸಾಕ್ಷಿ ಅವರ ಹೆಸರಿಗೆ ಖಾತೆಯಾಗಿದೆ ಎನ್ನುತ್ತಾರೆ. 3 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಷಯ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ವಿಷಯ ಗೊತ್ತಿತ್ತು, ಈ ಕೇಸ್ ಹಾಕಿದ ಮೇಲೆ ದಾಖಲೆಯನ್ನು ತೆಗೆಸಿದೆ ಎನ್ನುತ್ತಾರೆ. ಸದರಿ ಆಸ್ತಿಯ ಚೆಕ್ಕು ಬಂದಿ ನನಗೆ ಗೊತ್ತಿದೆ. ದಾಖಲೆಗಳನ್ನು ಪಡೆದು ನಾನೇ ವಾದಿಯರ ಕೈಯಲ್ಲಿ ಈ ದಾವೆಯನ್ನು ದಾಖಲಿಸಿದೆ. 5 ನೇ ಪ್ರತಿವಾದಿ ಹೆಸರಿಗೆ ಆದ ಖಾತೆಯನ್ನು ಪ್ರಶ್ನಿಸಿ ವಾದಿಯರು ರೆವಿನ್ಯೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ. 8 ನೇ ಪ್ರತಿವಾದಿ ಖರೀದಿ ಮಾಡಿದ್ದನ್ನು ವಾದಿಯರು ರೆವಿನ್ಯೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದಾರೆ. ವಾದಿಯರು ಪ್ರಶ್ನೆ ಮಾಡಿದರೂ ಸಹ 8 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿದ್ದಾರೆ. ವಾದಿಯರಿಗೆ ಹಕ್ಕಿಲ್ಲ ಎಂದು 8 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆದೇಶವನ್ನು ಪ್ರಶ್ನಿಸಿ ಎಸಿ ನ್ಯಾಯಾಲಯದಲ್ಲಿ ವಾದಿಯರು ಅರ್ಜಿ ಸಲ್ಲಿಸಿದ್ದಾರೆ. ಕ್ರಯಪತ್ರವಾದ ದಿನವೇ 3 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಸರ್ವೆ ನಂಬರ್ 151/6, 151/7, 151/8 ರ ಆಸ್ತಿಗಳ ಸ್ವಾಧೀನತೆಯನ್ನು ಕೊಟ್ಟರು ಎಂದರೆ ಕ್ರಯಪತ್ರಗಳ ಪ್ರಕಾರ ಕೊಟ್ಟಿದ್ದಾರೆ, ವಾದಿಯರೇ ಸ್ವಾಧೀನದಲ್ಲಿದ್ದಾರೆ ಎನ್ನುತ್ತಾರೆ.

ವಾದಿಯರು ಸದರಿ ಆಸ್ತಿಗಳಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ಹಿರಿಯಮ್ಮ ಮತ್ತು ನಾಗಮ್ಮ ತೀರಿದ ನಂತರ 3 ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂಬರ್ 151/6, 151/7, 151/8 ರ ಖಾತೆ ಆಯಿತು ಎಂದರೆ ಸರಿ. ರೆವಿನ್ಯೂ ದಾಖಲೆಗಳಲ್ಲಿ ಅಂದರೆ ಸರ್ವೆ ನಂಬರ್ 151/6, 151/7, 151/8 ದಾಖಲೆಗಳಲ್ಲಿ ವಾದಿಯರ ಹೆಸರು ಇಲ್ಲ. ವಾದಿಯರು ಸ್ವಾಧೀನದಲ್ಲಿದ್ದಾರೆ ಎಂದು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಅವರು ಸ್ವಾಧೀನದಲ್ಲಿದ್ದಾರೆ ಎನ್ನುತ್ತಾರೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು 1 ಮತ್ತು 2 ನೇ ಪ್ರತಿವಾದಿಯರ ಮೇಲೆ ಪರಿಹಾರ ಕೇಳಿದ್ದಾರೋ ಇಲ್ಲವೊ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರು

ಅಣ್ಣತಮ್ಮಂದಿರು ಎಂದರೆ ಸರಿ. ದ್ಯಾವಪ್ಪನ ತಂದೆಯ ಹೆಸರು ಕೊಟ್ರಪ್ಪ. ದಾವಾ ಐಟಂ ನಂಬರ್ 1 ಮತ್ತು 2 ದ್ಯಾವಪ್ಪ, ಹುಲುಗಮ್ಮ, ನಾಗಮ್ಮ ರವರ ಪಿತ್ರಾರ್ಜಿತ ಆಸ್ತಿಗಳು ಎನ್ನುವುದು ಸರಿ. ನಾಗಮ್ಮನಿಗೆ ಪಿತ್ರಾರ್ಜಿತ ಆಸ್ತಿಗಳಿಗೆ ಹಕ್ಕಿಲ್ಲ ಎನ್ನುವುದು ಸರಿಯಲ್ಲ. ದಾವಾ ಐಟಂ ನಂಬರ್ 1 ಮತ್ತು 2 ನೇ ಪ್ರತಿವಾದಿಯರು ನಾಗಮ್ಮನಿಂದ ವಿಲ್ ಮಾಡಿಸಿಕೊಂಡಿದ್ದಾರೆ. ನಾಗಮ್ಮನಿಗೆ ವಿಲ್ ಮಾಡುವ ಅಧಿಕಾರ ಇರಲಿಲ್ಲ ಎನ್ನುವುದು ಸರಿಯಲ್ಲ. ಹಿರಿಯಮ್ಮ ನಾಗಮ್ಮನ ವಂಶಸ್ಥರು ಎನ್ನುವುದು ಸರಿಯಲ್ಲ. ದುರುದ್ದೇಶದಿಂದ ಹಿರಿಯಮ್ಮ, ನಾಗಮ್ಮನ ವಂಶಸ್ಥರು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾಗಮ್ಮ ಬರೆದ ವಿಲ್ ಗೆ ಯಾರು ಪಾರ್ಟಿದಾರರಾಗಿ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಿಲ್ ಬಗ್ಗೆ ನನಗೆ ಮಾಹಿತಿ ಇಲ್ಲ. ವಿಲ್ಲನ್ನು ಬರೆಯುವಾಗ ಯಾರೆಲ್ಲಾ ಇದ್ದರು ಎಂದು ನನಗೆ ಗೊತ್ತಿಲ್ಲ. ನಾಗಮ್ಮನಿಗೆ ವಿಲ್ ಬರೆಯುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಈಗ ಇಲ್ಲ. ಹಿರಿಯಮ್ಮನ ಮಗಳು 4 ನೇ ಪ್ರತಿವಾದಿ ಇದ್ದಾರೆ. ದಾವಾ ಐಟಂ ನಂಬರ್ 1 ಮತ್ತು 2 4 ನೇ ಪ್ರತಿವಾದಿಗೆ ಹೋಗಬೇಕಾದ ಸ್ವತ್ತು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ಸದರಿ ಆಸ್ತಿಗಳಲ್ಲಿ ಹಕ್ಕಿದೆ ಎಂದರೆ ಸರಿಯಲ್ಲ. ವಿಲ್ಲನ್ನು ಆಧರಿಸಿ 1 ಮತ್ತು 2 ನೇ ಪ್ರತಿವಾದಿಯರಿಗೆ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಪ್ರೊಬೇಟ್ ಪಡೆದಿದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲ. ವಿಲ್ ನಲ್ಲಿ ಇರುವ ಆಸ್ತಿಗಳನೆಲ್ಲಾ ಈ ದಾವೆಯಲ್ಲಿ ಸೇರಿಸಿಲ್ಲ. ವಿಲ್ ನಲ್ಲಿರುವ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಸೇರಿಸದೇ 3 ನೇ ಪ್ರತಿವಾದಿಗೆ ನಾವು ಮೋಸ ಮಾಡಿದ್ದೇವೆ ಎನ್ನುವುದು ಸರಿಯಲ್ಲ. 4 ನೇ ಪ್ರತಿವಾದಿಗೆ ಸದರಿ ಆಸ್ತಿಗಳಲ್ಲಿ ಹಕ್ಕಿದೆ ಎನ್ನುವುದು ಸರಿಯಲ್ಲ.

1965 ರಲ್ಲಿ ಆದ ಹಿಸ್ಸಾ ಪತ್ರದಲ್ಲಿ ನಾನು ಪಾರ್ಟಿ ಇಲ್ಲ. ಸದರಿ ಹಿಸ್ಸಾ ಪತ್ರದಲ್ಲಿ ಎಲ್ಲಾ ಆಸ್ತಿಗಳನ್ನು ಸೇರಿಸಲಾಗಿದೆ. ವಿಲ್ ನಲ್ಲಿರುವ ಆಸ್ತಿಗಳನ್ನು ಬಿಟ್ಟು ಹಿಸ್ಸಾ ಪತ್ರದಲ್ಲಿ ಎಲ್ಲಾ ಆಸ್ತಿಗಳನ್ನು ಸೇರಿಸಿದೆ. 1965 ರಲ್ಲಿ ನಾಗಮ್ಮನಿಗೆ ಪಿತ್ರಾರ್ಜಿತವಾಗಿ ಆಸ್ತಿಗಳು ಬಂದವು ಎಂದರೆ ಸರಿ. 1969 ರಲ್ಲಿ ಹುಲುಗಮ್ಮ ತೀರಿದರು. ನಾಗಮ್ಮ 2001 ರಲ್ಲಿ ತೀರಿದರು. ನಾಗಮ್ಮ ಮತ್ತು ಹುಲುಗಮ್ಮ ಪ್ರತ್ಯೇಕವಾಗಿ ಇದ್ದರು. ಅವರಿಗಿದ್ದ ಮನೆಗಳ ನಂಬರ್ ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯ್ತಿಯಲ್ಲಿ ಮನೆಗಳಿಗೆ ನಂಬರ್ ಕೊಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೆರೆ ಅಂಚಿನಲ್ಲಿ ಇದ್ದ ಮನೆಗಳಿಗೆ ನಂಬರ್ ಕೊಡುವುದಿಲ್ಲ ಎನ್ನುತ್ತಾರೆ. ಹುಲುಗಮ್ಮ ಮತ್ತು ನಾಗಮ್ಮ ಪಂಚಾಯ್ತಿಗೆ ಕಂದಾಯ ಕಟ್ಟುತ್ತಿರಲಿಲ್ಲ. ನಾಗಮ್ಮನದು ಓಟರ್ ಲೀಸ್ಟ್ ಇದೆ, ಹುಲುಗಮ್ಮನದ್ದು ಇಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾಗಮ್ಮ ಪ್ರತ್ಯೇಕವಾಗಿದ್ದರು ಎನ್ನುವುದು ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ದ್ಯಾವಪ್ಪನ ಸ್ವಾಧೀನದಲ್ಲಿದ್ದವು. ನಾಗಮ್ಮನ ಎಲೆಕ್ಷನ್ ಐಡಿ ಕಾರ್ಡನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಅದನ್ನು ಬೇಕಾದರೆ ಹಾಜರುಪಡಿಸುತ್ತೇನೆ. ಹುಲುಗಮ್ಮನ ಐಡಿ ಕಾರ್ಡ್ ಇಲ್ಲ.

ಕೊಟ್ರಪ್ಪನಿಗೆ ದ್ಯಾವಪ್ಪನ ಸಂಬಂಧ ಇಲ್ಲ. ದ್ಯಾವಪ್ಪನಿಂದ ಹುಲುಗಮ್ಮನಿಗೆ ಬಂತು, ಆ ನಂತರ ಹಿರಿಯಮ್ಮನಿಗೆ ಬಂತು ಎಂದರೆ ಸಾಕ್ಷಿ ಪೌತಿ ಆಧಾರದ ಮೇಲೆ ಹಿರಿಯಮ್ಮನಿಗೆ ಮಾರಾಟ ಮಾಡಿರುತ್ತಾರೆ

ಎನ್ನುತ್ತಾರೆ. ಸಾಕ್ಷಿ ಮುಂದುವರೆದು ವಂಶಜರು ಎಂದು ಖಾತೆಯಾಯಿತು ಎನ್ನುತ್ತಾರೆ. ನಾಗಮ್ಮ ಮತ್ತು ಲೋಕಪ್ಪ ಒಂದೇ ಮನೆಯಲ್ಲಿದ್ದರು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ರೇಷನ್ ಕಾರ್ಡ್ ಇದೆ, ಅದನ್ನು ಬೇಕಾದರೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಲೋಕಪ್ಪ ಹಿರಿಯಮ್ಮನ ಮೇಲೆ ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ ವಿಷಯ ನನಗೆ ಗೊತ್ತಿಲ್ಲ. ಮೇಲ್ಮನವಿ ಏನಾಯಿತು ಎಂದು ನನಗೆ ಗೊತ್ತಿಲ್ಲ. ಎಸಿಯವರು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ನಾನೇ ಮಾನ್ಯ ಜಿಲ್ಲಾಧಿಕಾರಿಗಳ ಮುಂದೆ ರಿವಿಷನ್ ಪಿಟಿಷನ್ ಸಲ್ಲಿಸಿದೆ ಎನ್ನುವುದು ನನಗೆ ನೆನಪಿಲ್ಲ. ಆಗ ಲೋಕಪ್ಪ ತೀರಿಕೊಂಡರು ಎನ್ನುವುದು ಸರಿ. ಸದರಿ ರಿವಿಷನ್ ಅರ್ಜಿಗೆ ರತ್ನಮ್ಮನ ಮಕ್ಕಳು ಪಾರ್ಟಿಯಾಗಿದ್ದರು ಎನ್ನುವುದು ನನಗೆ ನೆನಪಿಲ್ಲ. ನಾನು ಸಲ್ಲಿಸಿದ ರಿವಿಷನ್ ಅರ್ಜಿ ವಜಾ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿಲ್ಲ. ದಾವಾ ಶೆಡ್ಯೂಲ್ 5 ರಲ್ಲಿ ವಾದಿಯರಿಗೆ ಹಕ್ಕಿಲ್ಲ ಎನ್ನುವುದು ಸರಿಯಲ್ಲ. ಅವರಿಗೆ ಹಕ್ಕಿದೆ ಎಂದು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. 9 ನೇ ಪ್ರತಿವಾದಿಯ ಪರಿಚಯ ನನಗೆ ಇದೆ. 8 ನೇ ಪ್ರತಿವಾದಿ 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ಸರಿ. ಸದರಿ ಕ್ರಯಪತ್ರವನ್ನು ಆಧರಿಸಿ 9 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ. ಸದರಿ ಖಾತೆಯನ್ನು ಪ್ರಶ್ನಿಸಿ ವಾದಿಯರು ರೆವಿನ್ಯೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ. ವಾದಿಯರು ವಾದ ಪತ್ರದಲ್ಲಿ ಹೇಳಿರುವ ರಿಟ್ ಅರ್ಜಿಯ ನಕಲನ್ನು ನಾನು ಹಾಜರುಪಡಿಸಿದ್ದೇನೋ ಇಲ್ಲವೊ ನನಗೆ ನೆನಪಿಲ್ಲ. ನಾನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. ಸದರಿ ರಿಟ್ ಅರ್ಜಿಗೆ ಚೇಫ್ ಸ್ಕ್ರೆಟರಿ, ಚಂದ್ರಪ್ಪ ಮತ್ತು ಕರಿಬಸಪ್ಪ ಪಾರ್ಟಿಯಾಗಿದ್ದರು. ಚಂದ್ರಪ್ಪ ಮತ್ತು ಕರಿಬಸಪ್ಪ ಈ ಪ್ರಕರಣದಲ್ಲಿ 6 ಮತ್ತು 7 ನೇ ಪ್ರತಿವಾದಿಯರು. ರಿಟ್ ಅರ್ಜಿ ಇತ್ಯರ್ಥವಾಗಿದೆ ಎನ್ನುವುದು ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದಾರೆ, ನೀಡಲಾಗಿದೆ)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.